159 ಇಲ (ಅ)

(73)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಎಸ್.ಶಿವಣ್ಣ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ಸೂಚನೆ:**

ರಾಜ್ಯದ ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರಪಾವತಿ, ಗುತ್ತಿಗೆ ಹಾಗೂ ಹೊರಗುತ್ತಿಗೆ ಪೌರಕಾರ್ಮಿಕರ ಸೇವೆಯನ್ನು ಕಾಲಮಿತಿಯೊಳಗೆ ಸಂಪೂರ್ಣವಾಗಿ ಖಾಯಂಗೊಳಿಸುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮಾವಳಿ 2011 ರೀತ್ಯಾ ಮಹಾನಗರಪಾಲಿಕೆಗಳಲ್ಲಿ (ಜಿಬಿಎ ಹೊರತುಪಡಿಸಿ) ಶೇ.50 ರಷ್ಟು ಪೌರ ಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ಹಾಗೂ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರ ಪಾವತಿ (ಹೊರಗುತ್ತಿಗೆ) ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.

ಪೌರಸೇವಾ ವೃಂದದ, ವೃಂದ ಮತ್ತು ನೇಮಕಾತಿ ನಿಯಮಾವಳಿ 2010 ರೀತ್ಯಾ ನಗರಸಭೆಗಳಲ್ಲಿ ಶೇ.50ರಷ್ಟು ಪೌರಕಾರ್ಮಿಕರನ್ನು ನೇರ ನೇಮಕಾತಿ ಮೂಲಕ ಹಾಗೂ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರ ಪಾವತಿ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ (ಹೊರಗುತ್ತಿಗೆ )ಮೂಲಕ ಪಡೆಯಲು ಅವಕಾಶ ಕಲ್ಪಿಸಿರುವುದಿಲ್ಲ, ಶೇ.100ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ

ಸರ್ಕಾರದ ಆದೇಶ ಸಂಖ್ಯೆ:ನಅಇ 126 ಟಿಎಂಎಸ್ 2016, ದಿನಾಂಕ: 07.08.2017 ರೀತ್ಯಾ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಿ, ಹಾಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಅಗತ್ಯಕ್ಕೆ ಅನುಗುಣವಾಗಿ, ಅಂದರೆ ಪ್ರತಿ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ (ಖಾಯಂ ಪೌರಕಾರ್ಮಿಕರನ್ನು ಸೇರಿ) ನೇರವಾಗಿ ಕೆಲಸಕ್ಕೆ ತೆಗೆದುಕೊಂಡು, ಅವರಿಗೆ ಸ್ಥಳೀಯ ಸಂಸ್ಥೆಗಳಿಂದ ಸಂಭಾವನೆಯನ್ನು ನೇರವಾಗಿ ನೀಡಲು ಆದೇಶಿಸಲಾಗಿರುತ್ತದೆ. ಪ್ರಸ್ತುತ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಹೊರಗುತ್ತಿಗೆಯಡಿ ಯಾವುದೇ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.

ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ನೇರ ಪಾವತಿ /ದಿನಗೂಲಿ, ಕ್ಷೇಮಾಭಿವೃದ್ಧಿ, ಗುತ್ತಿಗೆ/ಹೊರಗುತ್ತಿಗೆ/ಇತರೆ ಆಧಾರದ ಮೇಲೆ ಕನಿಷ್ಠ 2 ವರ್ಷ ಸೇವೆ ಸಲ್ಲಿಸಿರುವಂತಹ ಪೌರ ಕಾರ್ಮಿಕರನ್ನು ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿರುವ ಕನ್ನಡ ಭಾಷೆ ಮಾತನಾಡಲು ತಿಳಿದಿರುವ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ ನಅಇ 126 ಟಿಎಂಎಸ್ 2016 ದಿನಾಂಕ: 04.12.2017, ಸರ್ಕಾರದ ಆದೇಶ ಸಂಖ್ಯೆ ನಅಇ 176 ಜಿಇಎಲ್ 2022(ಭಾ-2)(ಇ) ದಿನಾಂಕ: 23.11.2022, ಸರ್ಕಾರದ ಆದೇಶ ಸಂಖ್ಯೆ: ನಅಇ 176 ಜಿಇಎಲ್ 2022 (ಭಾ-2) ದಿನಾಂಕ: 09.03.2023, ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024 (ಇ), ದಿನಾಂಕ: 27.09.2024 ರಲ್ಲಿ ವಿಶೇಷ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ:

## ಮಹಾನಗರ ಪಾಲಿಕೆಗಳು (ಜಿಬಿಎ ಹೊರತುಪಡಿಸಿ)

| ವರ್ಷ | ಹಂಚಿಕೆ ಮಾಡಿದ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ | ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆಯಲ್ಲಿರುವ ಹುದ್ದೆಗಳ ಸಂಖ್ಯೆ | ಅಧಿಸೂಚನೆ ಹೊರಡಿಸಲು ಬಾಕಿ ಇರುವ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 2017 (ವಿಶೇಷ ನೇಮಕಾತಿ) | 1366 | 782 | - | 584 | ಕ್ರಸಂ 05 ರಲ್ಲಿನ 584 ಹುದ್ದೆಗಳಲ್ಲಿ 243 ಹುದ್ದೆಗಳು ರೋಸ್ಟರ್ ನಂತೆ ಅಭ್ಯರ್ಥಿಗಳ ಅಲಭ್ಯತೆಯಿಂದ ಹುದ್ದೆಗಳು ಬ್ಯಾಕ್ ಲಾಗ್‌ನಲ್ಲಿರುತ್ತದೆ. ಮುಂದುವರೆದು 341 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ದಲ್ಲಿ WP.202852/2024 ದಿನಾಂಕ: 23.10.2024ರ ಆದೇಶದಲ್ಲಿ ಹೊಸ ನೇಮಕಾತಿ ಪ್ರಕ್ರಿಯನ್ನು ಮುಂದುವರೆಸದಂತೆ ಮಧ್ಯಂತರ ಆದೇಶವನ್ನು ಮಾಡಲಾಗಿರುವುದರಿಂದ ಒಟ್ಟು 584 ಹುದ್ದೆಗಳನ್ನು 2022 ನೇ ಸಾಲಿಗೆ ನೇಮಕಾತಿ ಪ್ರಕ್ರಿಯೆಗೆ ಒಳಪಡಿಸಲಾಗಿದೆ. |
| 2022 (ವಿಶೇಷ ನೇಮಕಾತಿ) | 1927 | 931 | 996 | - | ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ದಲ್ಲಿ WP.202852/2024 ರ ತಡೆಯಾಜ್ಞೆಯನ್ನು ದಿನಾಂಕ:19.11.2025 ವಜಾಗೊಳಿಸ ಲಾಗಿರುತ್ತದೆ. 2017 ನೇ ಸಾಲಿನ 584 ಹುದ್ದೆಗಳನ್ನು ಒಳಗೊಂಡಂತೆ ಒಳ ಮೀಸಲಾತಿಯಂತೆ ಮರು ಪ್ರಕಟಿಸಲು ಕ್ರಮ ವಹಿಸಲಾಗಿದೆ. |
| 2023 ಸಂಖ್ಯಾತಿರಿಕ್ತ ಹುದ್ದೆಗಳು (Supernu | 1433 | 735 | 698 | - | ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. |

| merary Posts) | | | | | |
|---|---|---|---|---|---|
| 2024 (ವಿಶೇಷ ನೇಮಕಾತಿ) | 327 | - | 327 | - | ಕ್ರಸಂ 4 ಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ದಿನಾಂಕ 13.05.2026 ರನ್ವಯ ನೇರನೇಮಕಾತಿ ಹುದ್ದೆಗಳಿಗೆ ಒಳಮೀಸಲಾತಿಯನ್ನು ಜಾರಿಗೊಳಿಸಿರುವಂತೆ ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಿದ್ದು ಚಾಲನೆಯಲ್ಲಿರುತ್ತದೆ. |

**ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ**

| ವರ್ಷ | ಹಂಚಿಕೆ ಮಾಡಿದ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ | ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆಯಲ್ಲಿರುವ ಹುದ್ದೆಗಳ ಸಂಖ್ಯೆ | ಅಧಿಸೂಚನೆ ಹೊರಡಿಸಲು ಬಾಕಿ ಇರುವ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 2017 (ವಿಶೇಷ ನೇಮಕಾತಿ) | 4438 | 2603 | - | - | 1835 ಹುದ್ದೆಗಳನ್ನು 2017ರ ಪೌರಕಾರ್ಮಿಕರ ವಿಶೇಷ ನೇಮಕಾತಿಯಡಿ ಖಾಯಂ ಮಾಡಲು ಸಾಧ್ಯವಾಗದೆ ಇರುವ ಹುದ್ದೆಗಳು |
| 2022 (ವಿಶೇಷ ನೇಮಕಾತಿ) | 5533 | 3861 | 95 | - | 2017ರ ವಿಶೇಷ ನೇಮಕಾತಿಯಡಿ ನೇಮಕಾತಿ ಮಾಡಲು ಸಾಧ್ಯವಾಗದ 1835 ಹುದ್ದೆಗಳ ನ್ನೊಳಗೊಂಡಂತೆ 5533 ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅರ್ಹ ಅಭ್ಯರ್ಥಿಗಳ ಲಭ್ಯವಿಲ್ಲದ ಕಾರಣ ನೇಮಕಾತಿ ಮಾಡಲು ಸಾಧ್ಯವಾಗದ 477 ಹುದ್ದೆಗಳನ್ನು |

| | | | | | |
|---|---|---|---|---|---|
| | | | | | ಮಹಾನಗರಪಾಲಿಕೆಗಳ ಯುಜಿಡಿ ಹೆಲ್ಪರ್ ಹುದ್ದೆಗೆ ನೇಮಕ ಮಾಡಲು ನೀಡಲಾಗಿರುತ್ತದೆ. ಅದರಂತೆ ಉಳಿದ 1100 ಹುದ್ದೆಗಳನ್ನು 2024ರ ವಿಶೇಷ ನೇಮಕಾತಿಯಡಿ ಹಂಚಿಕೆ ಮಾಡಲಾಗಿರುತ್ತದೆ. (5533-3861-95-477-1100) |
| 2023 ಸಂಖ್ಯಾತಿರಿಕ್ತ ಹುದ್ದೆಗಳು (Supernumerary Posts) | 132 | 03 | 73 | 56 | - |
| 2024 (ವಿಶೇಷ ನೇಮಕಾತಿ) | 1100 | 135 | 233 | 732 | - |

ಸರ್ಕಾರದ ಸುತ್ತೋಲೆ ದಿನಾಂಕ:25.11.2024ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಹೊರಡಿಸಬಾರದೆಂದು ಸೂಚಿಸಲಾಗಿತ್ತು. ನಂತರ ಸರ್ಕಾರದ ಆದೇಶ ದಿನಾಂಕ:13.05.2026 ರನ್ವಯ ನೇರ ನೇಮಕಾತಿ ಹುದ್ದೆಗಳಿಗೆ ಒಳಮೀಸಲಾತಿಯನ್ನು ಜಾರಿಗೊಳಿಸಿ ನೇಮಕಾತಿಗೆ ತುರ್ತು ಕ್ರಮವಹಿಸುವಂತೆ ಆದೇಶಿಸಿದ ಹಿನ್ನೆಲೆಯಲ್ಲಿ, ಪೌರಾಡಳಿತ ನಿರ್ದೇಶನಾಲಯದ ದಿನಾಂಕ:08.06.2026ರ ಪತ್ರದಲ್ಲಿ, ಮಹಾನಗರ ಪಾಲಿಕೆ/ ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಪೌರಕಾರ್ಮಿಕರ ಹುದ್ದೆಗಳನ್ನು ನೇರ / ವಿಶೇಷ ನೇಮಕಾತಿ ಮೂಲಕ ತುರ್ತಾಗಿ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ / ಆಯುಕ್ತರು, ಮಹಾನಗರ ಪಾಲಿಕೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಪ್ರಸ್ತುತ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

---

**ಕಡತ ಸಂಖ್ಯೆ: ನಅಇ 288 ಎಂಎನ್‌ಇ 2026 (ಇ)**

**(ಡಾ.ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು